

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **08–10–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಕಾಲದ ವಿಜಯಗಳ ಪ್ರಸ್ತಾಪ ನಡೆದಿತ್ತು. ಹಝ್ರತ್ ಉಮರ್(ರ)ರ ವಿಜಯಗಳ ಮತ್ತು ಅವುಗಳ ಕಾರಣಗಳ ಬಗ್ಗೆ ಪ್ರಸ್ತಾಪಿಸುತ್ತಾ ಅಲ್ಲಾಮ ಶಿಬ್‌ಲಿ ನುಅ್‌ಮಾನಿ ಬರೆಯುತ್ತಾರೆ: ಮರುಭೂಮಿ ನಿವಾಸಿಗಳಾದ ಕೆಲವರು ಹೇಗೆ ಇರಾನ್ ಮತ್ತು ರೋಮಿನ ಸಿಂಹಾಸನಗಳನ್ನು ಉರುಳಿಸಿದರು ಎಂಬ ಸವಾಲು ತಕ್ಷಣ ಒಬ್ಬ ಚಿಂತಕನ ಮನಸ್ಸಿನಲ್ಲಿ ಹುಟ್ಟಬಹುದು. ಏನು, ಇದು ಲೋಕಚರಿತ್ರೆಯ ಬೇರ್ಪಟ್ಟ ಒಂದು ಘಟನೆಯಾಗಿದೆಯೇ? ಈ ವಿಜಯಗಳನ್ನು ಅಲೆಕ್ಸಾಂಡರ್ ಮತ್ತು ಚಂಗೀಝ್‌ಖಾನನ ವಿಜಯದೊಂದಿಗೆ ಹೋಲಿಸಬಹುದೇ?

ಹಝ್ರತ್ ಉಮರ್(ರ) ಗೆದ್ದ ದೇಶಗಳ ಒಟ್ಟು ವಿಸ್ತೀರ್ಣ 22 ಲಕ್ಷ, 51 ಸಾವಿರದ ಮೂವತ್ತು ಚದರ ಮೈಲುಗಳಾಗಿತ್ತು. ಈ ವಿಜಯಗಳ ಕುರಿತು ಯುರೋಪಿನ ಚರಿತ್ರೆಗಾರರ ಅಭಿಪ್ರಾಯವೇನೆಂದರೆ, ಆ ಸಮಯದಲ್ಲಿ ರೋಮ್ ಮತ್ತು ಇರಾನಿನ ಆಡಳಿತಗಳ ವೈಭವ ನಷ್ಟವಾಗಿತ್ತು. ಖುಸ್ರೂ ಪರ್‌ವೇಝ್‌ನ ನಂತರ ಇರಾನಿನ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿಯೂ ಅಡಿಮೇಲಾಗಿತ್ತು. ನೌಶೀರ್‌ವಾನ್ ಅಧಿಕಾರಕ್ಕೆ ಬರುವುದಕ್ಕೆ ಸ್ವಲ್ಪ ಮುಂಚೆ ನಾಸ್ತಿಕ ಪಂಗಡವಾದ ಮಝ್‌ದಿಖಿ ಬಹಳ ಪ್ರಬಲಗೊಂಡಿತ್ತು. ಅವರ ಪ್ರಕಾರ ಲಾಲಸೆಯನ್ನು ದೂರಮಾಡಲು ಸ್ತ್ರೀಗಳ ಸಮೇತ ಎಲ್ಲ ಸಂಪತ್ತುಗಳನ್ನು ಸಾರ್ವಜನಿಕ ಸ್ವತ್ತನ್ನಾಗಿ ಮಾಡಲಾಗಿತ್ತು. ಅದೇ ರೀತಿಯಲ್ಲಿ ಕ್ರೈಸ್ತರ ನಸ್ತೂರಿ ಪಂಗಡಕ್ಕೆ ಯಾವುದೇ ಸರ್ಕಾರದಲ್ಲಿ ಅಭಯ ಸಿಗುತ್ತಿರಲಿಲ್ಲ. ಆದರೆ ಮುಸ್ಲಿಮರು ಧಾರ್ಮಿಕ ವಿಶ್ವಾಸಗಳಿಗೆ ಅಡ್ಡಿಯಾಗಿ ನಿಲ್ಲದ ಕಾರಣದಿಂದ ದೀರ್ಘಕಾಲದದಿಂದ ದೌರ್ಜನ್ಯಕ್ಕೆ ಒಳಗಾಗಿದ್ದ ಈ ಎರಡೂ ಪಂಗಡಗಳು ಇಸ್ಲಾಮಿನ ನೆರಳಿನಲ್ಲಿ ಬಂದು ವಿರೋಧಿಗಳ ದೌರ್ಜನ್ಯಗಳಿಂದ ರಕ್ಷಣೆ ಪಡೆದವು.

ರೋಮಿನ ಆಡಳಿತದ ಬಗ್ಗೆ ಯುರೋಪಿನ ಚರಿತ್ರೆಗಾರರ ಅಭಿಪ್ರಾಯವೇನೆಂದರೆ, ಕ್ರೈಸ್ತರಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳು ಆ ದಿನಗಳಲ್ಲಿ ಶಕ್ತಗೊಂಡಿದ್ದುವು ಮತ್ತು ಸರ್ಕಾರ ದುರ್ಬಲಗೊಂಡಿತ್ತು. ಅಲ್ಲಾಮ ಶಿಬ್ಲಿ ಇದನ್ನು ಅಲ್ಲಗಳೆಯುತ್ತಾ ಹೇಳುತ್ತಾರೆ: ನಿಸ್ಸಂಶಯವಾಗಿಯೂ ಆ ಸಮಯದಲ್ಲಿ ಇರಾನ್ ಮತ್ತು ರೋಮಿನ ಆಡಳಿತಗಳು ಶಕ್ತವಾಗಿರಲಿಲ್ಲ. ಆದರೆ ಸಾಧನ ಸಾಮಗ್ರಿಗಳು ಏನೂ ಇಲ್ಲದಂತಹ ಅರೇಬಿಯದ ಸಮುದಾಯವನ್ನು ಎದುರಿಸಿದ ಕಾರಣದಿಂದ ನುಚ್ಚುನೂರಾಗುವಷ್ಟು ದುರ್ಬಲವೂ ಅವುಗಳು ಆಗಿರಲಿಲ್ಲ. ರೋಮ್ ಮತ್ತು ಇರಾನ್ ಯುದ್ಧತಂತ್ರಗಳಲ್ಲಿ ನಿಪುಣವಾಗಿದ್ದುವು. ವಿವಿಧ ತರದ ಯುದ್ಧ ಸಾಮಗ್ರಿಗಳನ್ನು ಹೊಂದಿದ್ದರು, ತಮ್ಮ ಕೋಟೆಗಳಲ್ಲಿ ಮತ್ತು ಕಂದಕಗಳಲ್ಲಿ ಇದ್ದುಕೊಂಡೇ ದೇಶವನ್ನು ಸಂರಕ್ಷಿಸಬಹುದಾಗಿತ್ತು.

ಇನ್ನೊಂದು ಕಡೆ ಅರೇಬಿಯದ ಪೂರ್ಣ ಸೈನ್ಯದ ಸಂಖ್ಯಾಬಲ ಒಂದು ಲಕ್ಷಕ್ಕಿಂತಲೂ ಕಡಿಮೆಯಾಗಿತ್ತು. ಅದಲ್ಲದೇ ರೂಢಿಯಲ್ಲಿದ್ದ ಯುದ್ಧ ಅಸ್ತ್ರಗಳನ್ನು ಅವರು ಹೊಂದಿರಲಿಲ್ಲ ಮತ್ತು ಹೊಸ ಯುದ್ಧತಂತ್ರಗಳನ್ನು ಅವರು ಅರಿತಿರಲಿಲ್ಲ. ಒಟ್ಟಿನಲ್ಲಿ ಈ ಸವಾಲಿನ ಯಥಾರ್ಥ ಉತ್ತರವೇನೆಂದರೆ, ಮುಸ್ಲಿಮರಲ್ಲಿ ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರ ಕಾರಣದಿಂದ ಆವೇಶ, ದೃಢನಿರ್ಧಾರ, ಸ್ಥಿರತೆ, ಉನ್ನತ ಮಟ್ಟದ ಧೈರ್ಯ ಮತ್ತು ಶೌರ್ಯ ಉಂಟಾಗಿತ್ತು. ಅದನ್ನು ಹಝ್ರತ್ ಉಮರ್(ರ) ಇನ್ನೂ ಹೆಚ್ಚು ವರ್ಧಿಸಿದರು. ಮುಸ್ಲಿಮರ ಸತ್ಯಸಂಧತೆ ಮತ್ತು ಪ್ರಾಮಾಣಿಕತೆಯು ಆಡಳಿತ ನಡೆಸಲು ಅವರಿಗೆ ಸಹಾಯಕವಾದುವು. ಇದೇ ಕಾರಣದಿಂದ ಪ್ರಜೆಗಳು ಸಹ ಅವರಿಗೆ ಅಡ್ಡಿಯಾಗಿ ನಿಲ್ಲಲಿಲ್ಲ. ಮುಸ್ಲಿಮರ ನೈತಿಕ ಸ್ವಭಾವಗುಣಗಳನ್ನು ನೋಡಿಕೊಂಡು ಇರಾಕ್ ಮತ್ತು ಸಿರಿಯದ ಸರದಾರರು ಮತ್ತು ಆಡಳಿತದ ಅಧಿಕಾರಿಗಳು ಸಹ ಮುಸ್ಲಿಮರಾದರು. ಆದ್ದರಿಂದ ಇಲ್ಲಿ ಅಲೆಕ್ಸಾಂಡರ್ ಮತ್ತು ಚಂಗೀಝ್‌ಖಾನಿನ ಹೆಸರನ್ನು ಹೇಳುವುದು ಕಿಂಚಿತ್ತೂ ಸರಿಯಲ್ಲ. ಅವರಿಬ್ಬರೂ ಆಕ್ರಮಣ, ದೌರ್ಜನ್ಯ ಮತ್ತು ಸಾಮೂಹಿಕ ಕೊಲೆಗಳನ್ನು ಮಾಡಿ ದೊಡ್ಡ ದೊಡ್ಡ ವಿಜಯಗಳನ್ನು ಗಳಿಸಿದ್ದರು. ಆದರೆ ಮುಸ್ಲಿಮರು ಸತ್ಯ, ಸಹನೆ, ನ್ಯಾಯಪಾಲನೆಯಿಂದ ಪ್ರಜೆಗಳ ಮನಸ್ಸನ್ನು ಗೆದ್ದರು. ಚಂಗೀಝ್‌ಖಾನ್, ಬಖ್ತ್‌ನಸರ್, ತೈಮೂರ್, ನಾದಿರ್‌ಶಾಹ್ ಮುಂತಾದವರೆಲ್ಲರೂ ಕ್ರೂರಿಗಳಾಗಿದ್ದರು. ಆದರೆ ಹಝ್ರತ್ ಉಮರ್(ರ)ರ ವಿಜಯಗಳಲ್ಲಿ ಎಂದಿಗೂ ಕಾನೂನು ಮತ್ತು ನ್ಯಾಯದ ಮಿತಿಗಳನ್ನು ಉಲ್ಲಂಘಿಸಲಾಗುತ್ತಿರಲಿಲ್ಲ. ಮೃತದೇಹಗಳನ್ನು ಕುರೂಪಗೊಳಿಸುವುದು, ಮಕ್ಕಳನ್ನು ಕೊಲ್ಲುವುದು, ಒಪ್ಪಂದದ ಉಲ್ಲಂಘನೆ ಮತ್ತು ಜನರ ಹತ್ಯಾಕಾಂಡ ಮಾಡುವುದು ಅಂತು ದೂರದ ಸಂಗತಿ, ಒಂದು ಮರವನ್ನು ಕೂಡ ಕಡಿದುಹಾಕುವ ಅನುಮತಿ ಇರಲಿಲ್ಲ.

ಲೋಕದಲ್ಲಿ ಬೇರೆಯೂ ಮಹಾ ಪರಾಕ್ರಮಿಗಳು ಇದ್ದರು ಎಂದು ಹಝ್ರತ್ ಉಮರ್(ರ)ರ ಅದ್ಭುತಕರವಾದ ವಿಜಯಗಳಿಗೆ ಜವಾಬು ನೀಡುತ್ತಾ ಕೆಲವರು ಹೇಳುತ್ತಾರೆ. ಆದರೆ

ಇಷ್ಟು ಮುಂಜಾಗ್ರತೆ, ನ್ಯಾಯಪಾಲನೆ, ಕ್ಷಮೆಯಿಂದ ಯಾವ ಆಡಳಿತಗಾರ ಒಂದು ಗೇಣಿನಷ್ಟು ಭೂಮಿಯನ್ನು ಜಯಿಸಿದ್ದನು ಎಂದು ಅವರು ತೋರಿಸಲಿ. ಅಲೆಕ್ಸಾಂಡರ್, ಚಂಗೀಝ್‌ಖಾನ್ ಮುಂತಾದವರು ಸ್ವತಃ ಯುದ್ಧದಲ್ಲಿ ಭಾಗವಹಿಸುತ್ತಿದ್ದರು. ಆದರೆ ಹಝ್ರತ್ ಉಮರ್(ರ) ತನ್ನ ಸಂಪೂರ್ಣ ಖಿಲಾಫತ್ ಕಾಲದಲ್ಲಿ ಒಮ್ಮೆ ಕೂಡ ಯಾವುದೇ ಯುದ್ಧದಲ್ಲಿ ನೇರವಾಗಿ ಭಾಗಿಯಾಗಿರಲಿಲ್ಲ. ಆದರೆ ಸಂಪೂರ್ಣ ಸೈನ್ಯದ ಲಗಾಮು ಅವರ ಕೈಯಲ್ಲಿ ಇರುತ್ತಿತ್ತು. ಅಲೆಕ್ಸಾಂಡರ್ ಮುಂತಾದವರ ವಿಜಯಗಳು ಮೋಡಗಳಂತಾಗಿದ್ದುವು. ಅದು ಒಮ್ಮೆ ಶಕ್ತವಾಗಿ ಬಂದು ಕೂಡಲೇ ಹೊರಟುಹೋಯಿತು. ಆದರೆ ಹಝ್ರತ್ ಉಮರ್ ಫಾರೂಖ್(ರ)ರ ವಿಜಯಗಳಲ್ಲಿ ಇದ್ದ ದೃಢತೆ ಎಷ್ಟಾಗಿತ್ತೆಂದರೆ, ಮುಸ್ಲಿಮರು ಜಯಿಸಿದ ರಾಜ್ಯಗಳು ಹದಿಮೂರು ಶತಮಾನಗಳ ನಂತರವೂ ಇಂದು ಕೂಡ ಇಸ್ಲಾಮಿನ ವಶದಲ್ಲಿ ಇವೆ.

ಈ ವಿಜಯಗಳಲ್ಲಿ ಆಗಿನ ಆವೇಶ ಮತ್ತು ಧೈರ್ಯಗಳಿಗೆ ಇದ್ದಷ್ಟು ಪಾತ್ರ ಖಲೀಫರಿಗೆ ಇರಲಿಲ್ಲವೆಂಬ ಸಾಮಾನ್ಯ ಅಭಿಪ್ರಾಯದ ಬಗ್ಗೆ ಅಲ್ಲಾಮ ಶಿಬ್‌ಲಿ ಬರೆಯುತ್ತಾರೆ: ಹಝ್ರತ್ ಉಸ್ಮಾನ್(ರ) ಮತ್ತು ಹಝ್ರತ್ ಅಲಿ(ರ)ರವರ ಕಾಲದಲ್ಲೂ ಸಹ ಅದೇ ಮುಸ್ಲಿಮರು ಇದ್ದರು. ಆದರೆ ಪರಿಣಾಮವೇನಾಯಿತು? ಆವೇಶ ಮತ್ತು ಪ್ರಭಾವ ನಿಸ್ಸಂಶಯವಾಗಿಯೂ ಮಿಂಚಿನಂತಹ ಶಕ್ತಿಗಳಾಗಿವೆ. ಆದರೆ ಈ ಸಾಮರ್ಥ್ಯಗಳನ್ನು ಉಪಯೋಗಿಸುವವನು ಸಹ ಅದೇ ಶಕ್ತಿ ಮತ್ತು ಸಾಮರ್ಥ್ಯವನ್ನು ಹೊಂದಿರುವ ವ್ಯಕ್ತಿಯಾಗಿದ್ದರೆ ಮಾತ್ರ ಅವುಗಳಿಂದ ಪ್ರಯೋಜನ ಲಭಿಸುವುದು. ಸಂಪೂರ್ಣ ಸೈನ್ಯ ಒಂದು ಗೊಂಬೆಯ ಹಾಗೆ ಹಝ್ರತ್ ಉಮರ್(ರ)ರ ಸೂಚನೆಗಳ ಪ್ರಕಾರ ಚಲಿಸುತ್ತಿತ್ತು ಎಂದು ಹಝ್ರತ್ ಉಮರ್(ರ)ರ ವಿಜಯಗಳಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ. ಸೈನ್ಯದ ಕ್ರಮೀಕರಣ, ಸೈನ್ಯದ ತರಬೇತಿ, ಸೈನಿಕ ನಿವಾಸಗಳ ನಿರ್ಮಾಣ, ಕುದುರೆಗಳ ಪರಿಪಾಲನೆ, ಕೋಟೆಗಳ ಸಂರಕ್ಷಣೆ, ಹವಾಮಾನದ ಅನುಸಾರ ಸೈನಿಕರನ್ನು ಸ್ಥಳಾಂತರಗೊಳಿಸುವುದು, ಪತ್ರ ವ್ಯವಹಾರದ ವ್ಯವಸ್ಥೆ, ಸೇನಾಧಿಪತಿಗಳ ಆಯ್ಕೆ, ಕೋಟೆಗಳನ್ನು ವಶಪಡಿಸಲು ಬೇಕಾದ ಆಯುಧಗಳ ಆಯ್ಕೆ ಮತ್ತು ಈ ರೀತಿಯ ಅನೇಕ ವಿಧಗಳ ಕಾರ್ಯಗಳನ್ನು ಹಝ್ರತ್ ಉಮರ್(ರ) ಸ್ವತಃ ಶುರುಮಾಡಿದರು ಮತ್ತು ಶಕ್ತವಾಗಿ ಅದನ್ನು ನೆಲೆನಿಲ್ಲಿಸಿದರು. ಹತ್ತು ವರ್ಷಗಳಷ್ಟು ದೀರ್ಘ ಕಾಲಾವಧಿಯ ಈ ಯುದ್ಧಗಳಲ್ಲಿ ಎರಡು ಅತ್ಯಂತ ಅಪಾಯಕಾರಿ ಸಂದರ್ಭಗಳು ಬಂದಿದ್ದುವು. ಒಂದು, ನಹಾವಂದಿನ ಯುದ್ಧದಲ್ಲಿ, ಮತ್ತೊಂದು ರೋಮಿನ ಅರಸನು ದ್ವೀಪವಾಸಿಗಳ ಸಹಾಯದೊಂದಿಗೆ ಪುನಃ ಹಮಸಿನ ಮೇಲೆ ದಾಳಿ ನಡೆಸಿದ ಸಂದರ್ಭದಲ್ಲಿ. ಈ ಎರಡೂ ಸಂದರ್ಭಗಳಲ್ಲಿ ಎದ್ದಿದ್ದ ಬಿರುಗಾಳಿಯನ್ನು ಹಝ್ರತ್ ಉಮರ್(ರ) ಪ್ರಯೋಗಿಸಿದ ಉತ್ತಮ ಯುದ್ಧತಂತ್ರಗಳೇ ತಗ್ಗಿಸಿದ್ದುವು. ವಿಜಯಗಳು ಮತ್ತು ನ್ಯಾಯಪಾಲನೆ ಎರಡನ್ನೂ ಜೊತೆ ಜೊತೆಗೆ ಕೊಂಡುನಡೆದ ಹಝ್ರತ್ ಉಮರ್(ರ)ರಿಗೆ ಸಮಾನವಾದ ಜಾಗತಿಕ ವಿಜಯಿ ಇಂದಿನ ತನಕ ಹುಟ್ಟಿಲ್ಲ.

ಹಝ್ರತ್ ಪೈಗಂಬರ್(ಸ) ಒಂದು ಬಾರಿ ಹಝ್ರತ್ ಉಮರ್(ರ)ರ ಪರವಾಗಿ ದುಆ ಮಾಡುತ್ತಾ ಹೀಗೆ ಹೇಳಿದ್ದರು: ಹೊಸ ವಸ್ತ್ರಗಳನ್ನು ಧರಿಸು, ಶ್ಲಾಘನೀಯ ಜೀವಿತವನ್ನು ಸಾಗಿಸು ಮತ್ತು ಹುತಾತ್ಮರ ಮೃತ್ಯುವನ್ನು ಪಡೆಯು. ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ), ಹಝ್ರತ್ ಉಸ್ಮಾನ್(ರ)ರೊಂದಿಗೆ ಹಝ್ರತ್ ಪೈಗಂಬರ್(ಸ) ಉಹದ್ ಪರ್ವತವನ್ನು ಏರುತ್ತಿದ್ದಾಗ ಅದು ಅಲುಗಾಡಲು ಶುರುವಾಯಿತು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಉಹದ್, ಕಂಪಿಸಬೇಡ, ನಿನ್ನ ಮೇಲೆ ಒಬ್ಬ ನಬಿ, ಒಬ್ಬ ಸಿದ್ದೀಖ್, ಇಬ್ಬರು ಶಹೀದರು ಇರುವರು. ಮತ್ತೊಂದು ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಹೇಳಿದರು: ಹಝ್ರತ್ ಉಮರ್(ರ)ರ ಮರಣದಿಂದ ಇಸ್ಲಾಮಿಕ ಲೋಕ ಅಳುವುದು ಎಂದು ಹಝ್ರತ್ ಜಿಬ್ರೀಲ್(ಅ) ನನ್ನೊಡನೆ ಹೇಳಿರುವರು. ಉಮ್ಮುಲ್ ಮೂಅ್‌ಮಿನೀನ್ ಹಝ್ರತ್ ಹಫ್ಸ(ರ) ಹೇಳುತ್ತಾರೆ: ನನ್ನ ತಂದೆಯಾದ ಹಝ್ರತ್ ಉಮರ್(ರ) ಹೀಗೆ ದುಆ ಮಾಡುತ್ತಿದ್ದರು: ಹೇ ಅಲ್ಲಾಹ್, ನಿನ್ನ ಮಾರ್ಗದಲ್ಲಿ ನನಗೆ ಶಹಾದತಿನ ಭಾಗ್ಯವನ್ನು ನೀಡು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ನನಗೆ ಮದೀನದಲ್ಲಿ ಶಹಾದತ್ ನೀಡು" ಎಂದು ಹಝ್ರತ್ ಉಮರ್(ರ) ದುಆ ಮಾಡುತ್ತಿದ್ದರು. ಶತ್ರುಗಳು ಮದೀನವನ್ನು ಆಕ್ರಮಿಸಿ ಮದೀನದ ಗಲ್ಲಿಗಳಲ್ಲಿ ಹಝ್ರತ್ ಉಮರ್‌ರನ್ನು ಶಹೀದ್ ಮಾಡಬೇಕು ಎಂಬುದು ಎಷ್ಟು ಅಪಾಯಕಾರಿಯಾದ ದುಆ ಆಗಿತ್ತು. ಆದರೆ ಅಲ್ಲಾಹನು ಅವರ ಪ್ರಾರ್ಥನೆಯನ್ನು ಬೇರೊಂದು ರೀತಿಯಲ್ಲಿ ಈಡೇರಿಸಿದನು. ಅದೇನೆಂದರೆ, ಮುಸ್ಲಿಮನೆಂದು ಹೇಳಲ್ಪಡುವ ಒಬ್ಬ ವ್ಯಕ್ತಿಯ ಕೈಗಳಿಂದಲೇ ಅವರು ಮದೀನದಲ್ಲಿ ಶಹೀದ್ ಆದರು.

ಹಝ್ರತ್ ಉಮರ್(ರ)ರ ಶಹಾದತಿನ ಕುರಿತು ಹಝ್ರತ್ ಅಬೂ ಮೂಸಾ ಅಶ್‌ಅರಿ(ರ) ಮತ್ತು ಹಝ್ರತ್ ಔಫ್ ಬಿನ್ ಮಾಲಿಕ್(ರ) ಕನಸನ್ನು ಕಂಡಿದ್ದರು. ಅದೇ ರೀತಿಯಲ್ಲಿ ಹಝ್ರತ್ ಉಮರ್(ರ) ಸ್ವತಃ ತನ್ನ ಶಹಾದತಿನ ಕುರಿತು ದಿವ್ಯದರ್ಶನವನ್ನು ಕಂಡಿದ್ದರು. ಹಿಜರೀ 23, ಧುಲ್‌ಹಜ್ಜ 26ರಂದು ಹಝ್ರತ್ ಉಮರ್(ರ)ರ ಮೇಲೆ ಹಲ್ಲೆ ನಡೆಸಿ ಗಾಯಗೊಳಿಸಲಾಗಿತ್ತು. ಹಿಜರೀ 24, ಮುಹರ್ರಂ ಒಂದರಂದು ಅವರು ಶಹೀದ್ ಆದರು. ಅದೇ ದಿನದಂದು ಅವರನ್ನು ದಫನ್ ಮಾಡಲಾಯಿತು.

ಸಹೀಹ್ ಬುಖಾರಿಯಲ್ಲಿ ನಮೂದಿಸಲಾಗಿರುವ ಶಹಾದತ್ ಘಟನೆಯ ವಿವರಣೆ ಪ್ರಕಾರ, ಫಜ್ರ್ ನಮಾಝಿನ ವೇಳೆ, ಮುಗೈರ ಎಂಬ ಹೆಸರಿನ ಓರ್ವ ಅರಬಿಯೇತರ ಗುಲಾಮನು ಹಝ್ರತ್ ಉಮರ್(ರ)ರ ಮೇಲೆ ಇರುಭಾಗಗಳೂ ಚೂಪಾದ ಚೂರಿಯಿಂದ ಹಲ್ಲೆ ನಡೆಸಿದನು. ಆ ವ್ಯಕ್ತಿಯು ಸ್ವತಃ ರಕ್ಷಣೆ ಹೊಂದಲು ಬೇರೆ 13 ಜನರನ್ನೂ ಗಾಯಾಳುಗೊಳಿಸಿದ್ದನು. ಅವರಲ್ಲಿ ಏಳು ಮಂದಿ ಮರಣಪಟ್ಟರು. ಗಾಯಾಳುವಾದಾಗ, ಹಝ್ರತ್ ಉಮರ್(ರ) ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ)ರನ್ನು ಇಮಾಮತಿಗಾಗಿ ಮುಂದೆ ನಿಲ್ಲಿಸಿದರು. ಅವರು ಇಮಾಮತ್ ವಹಿಸಿ ನಮಾಝನ್ನು ಹ್ರಸ್ವವಾಗಿ ನಿರ್ವಹಿಸಿ ಮುಗಿಸಿದರು. ಹಝ್ರತ್ ಉಮರ್(ರ)ರನ್ನು ಮಸೀದಿಯಿಂದ

ಎತ್ತಿ ಮನೆಗೆ ತರಲಾಯಿತು. ಅವರಿಗೆ ಮೊದಲು ದ್ರಾಕ್ಷೆ ರಸವನ್ನು, ಅನಂತರ ಹಾಲನ್ನು ಕುಡಿಸಲಾಯಿತು. ಆದರೆ ಅದು ಗಾಯವಾದ ಭಾಗದಿಂದ ಹರಿದುಹೋದವು. ಹಝ್ರತ್ ಉಮರ್(ರ) ಮೃತ್ಯುವಿನ ದವಡೆಯಿಂದ ಪಾರಾಗಲಾರರು ಎಂದು ಜನರಿಗೆ ಮನವರಿಕೆಯಾಯಿತು. ಒಬ್ಬ ಯುವಕ ಹಝ್ರತ್ ಉಮರ್(ರ)ರ ಶ್ರೇಷ್ಠತೆಗಳನ್ನು ಹೇಳಲು ಶುರುಮಾಡಿದಾಗ ಹಝ್ರತ್ ಉಮರ್(ರ) ಹೇಳಿದರು: ಈ ಸಂಗತಿಗಳು ಸಮಸಮವಾಗಿ ಇರಲಿ ಎಂದಾಗಿದೆ ನನ್ನ ಅಭಿಲಾಷೆ. ಎಂದರೆ, ನನಗೆ ಶಿಕ್ಷೆಯೂ ಲಭಿಸದಿರಲಿ, ನನಗೆ ಪ್ರತಿಫಲವೂ ಬೇಡ.

ಅಬ್ದುಲ್ಲಾಹ್ ಬಿನ್ ಉಮರ್(ರ)ರಿಂದ ಹಝ್ರತ್ ಉಮರ್(ರ) ತನ್ನ ಸಾಲಗಳ ಲೆಕ್ಕವನ್ನು ಮಾಡಿಸಿದರು. ಅದು ಸುಮಾರು 86 ಸಾವಿರ ದಿರ್ಹಂ ಆಗಿತ್ತು. ಅದರ ಪಾವತಿಯ ಕುರಿತು ನಿರ್ದೇಶನಗಳನ್ನು ನೀಡಿದರು. ಅನಂತರ ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್(ರ)ರನ್ನು ಹಝ್ರತ್ ಆಯಿಶ(ರ)ರ ಬಳಿಗೆ ಕಳುಹಿಸುತ್ತಾ ಹೇಳಿದರು: ಇಬ್ಬರು ಸಂಗಡಿಗರೊಂದಿಗೆ {ಎಂದರೆ, ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ರ)} ದಫನ್ ಮಾಡಿಸಲು ಉಮರ್ ಬಿನ್ ಖತ್ತಾಬ್ ಅನುಮತಿ ಕೇಳುತ್ತಿದ್ದಾರೆ ಎಂದು ಹಝ್ರತ್ ಆಯಿಶ(ರ)ರೊಡನೆ ಹೇಳು.

ಅಬ್ದುಲ್ಲಾಹ್ ಬಿನ್ ಉಮರ್(ರ) ಹಝ್ರತ್ ಆಯಿಶ(ರ)ರ ಬಳಿಗೆ ತಲುಪಿದಾಗ ಅವರು ಅಳುತ್ತಿದ್ದರು. ಹಝ್ರತ್ ಉಮರ್(ರ)ರ ಸಂದೇಶವನ್ನು ಕೇಳಿ ಹಝ್ರತ್ ಆಯಿಶ(ರ) ಹೇಳಿದರು: ನಾನು ಆ ಜಾಗವನ್ನು ನನಗಾಗಿ ಕಾದಿರಿಸಿದ್ದೆ. ಆದರೆ ಇಂದು ನಾನು ನನಗಿಂತ ಹಝ್ರತ್ ಉಮರ್(ರ)ರಿಗೆ ಆದ್ಯತೆಯನ್ನು ನೀಡುತ್ತೇನೆ. ಹಝ್ರತ್ ಆಯಿಶ(ರ)ರಿಂದ ಅನುಮತಿ ಲಭಿಸಿದ ಸುದ್ದಿಯನ್ನು ಕೇಳಿ ಹಝ್ರತ್ ಉಮರ್(ರ) ಹೇಳಿದರು: ಅಲ್‌ಹಮ್ದುಲಿಲ್ಲಾಹ್, ನನಗೆ ಇದಕ್ಕಿಂತ ಹೆಚ್ಚು ಬೇರೆ ಯಾವುದೇ ಸಂಗತಿಯ ಬಗ್ಗೆ ಚಿಂತೆಯಿರಲಿಲ್ಲ.

ಹಝ್ರತ್ ಅಲಿ(ರ), ಹಝ್ರತ್ ಉಸ್ಮಾನ್(ರ), ಹಝ್ರತ್ ಝುಬೇರ್(ರ), ಹಝ್ರತ್ ತಲ್‌ಹ(ರ), ಹಝ್ರತ್ ಸಅದ್(ರ), ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ)ರನ್ನು ಹಝ್ರತ್ ಉಮರ್(ರ) ಖಿಲಾಫತಿನ ಚುನಾವಣೆಗಾಗಿ ನಿಶ್ಚಯಿಸಿದರು ಮತ್ತು ಚುನಾಯಿತರಾಗುವ ಖಲೀಫರು ಮುಹಾಜಿರರೊಂದಿಗೆ, ಅನ್ಸಾರ್, ಮರಳುಗಾಡಿನ ಅರೇಬಿಯರು ಮತ್ತು ನಿರ್ಗತಿಕರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಬೇಕೆಂದು ಉಪದೇಶಿಸಿದರು.

(ಹಝ್ರತ್ ಉಮರ್(ರ)ರ ಪ್ರಸ್ತಾಪ ಮುಂದುವರೆಯುವುದು ಎಂದು ಹೇಳಿದ ನಂತರ ಹುಝೂರ್ ಹೇಳಿದರು:) ಇಂದು ಜರ್ಮನಿಯ ಜಲ್ಸ ಆರಂಭವಾಗುವುದು. ಇದು ಎರಡು ದಿವಸಗಳ ಜಲ್ಸ ಆಗಿದೆ. ನಾಳೆ ಸಮಾರೋಪ ಸಭೆಯಲ್ಲಿ ನಾನು ಭಾಷಣ ಮಾಡುವೆನು – ಇನ್ಶಾ ಅಲ್ಲಾಹ್. ಅಲ್ಲಾಹನು ಈ ಜಲ್ಸವನ್ನು ಅನುಗ್ರಹೀತಗೊಳಿಸಲಿ – ಆಮೀನ್.

(ಖುತ್ಬದ ಕೊನೆಯಲ್ಲಿ ಹುಝೂರ್ ಇಬ್ಬರು ದಿವಂಗತರಾದ ಸನ್ಮಾನ್ಯ ಖಮರುದ್ದೀನ್ ಸಾಹಿಬ್, ಮುಬಲ್ಲಿಗ್ ಇಂಡೋನೇಶಿಯ ಮತ್ತು ಸುಲ್ತಾನ್ ಹಾರೂನ್ ಖಾನ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಸಬೀಹ ಹಾರೂನ್ ಸಾಹಿಬರವರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಅವರ ಜನಾಝ ಗ್ಹಾಇಬ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 08-10-2021*

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon